ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 21-11-1998.

# *ಸೇವೆಯ ಜೊತೆ ದೇಹದಲ್ಲಿ ಇರುತ್ತಾ ವಿದೇಹಿ ಸ್ಥಿತಿಯ ಅನುಭವವನ್ನು ಹೆಚ್ಚಿಸಿ*

(सेवा के साथ देह में रहते विदेही अवस्था का अनुभव बढ़ाओ)

ಇಂದು ಬಾಪ್‌ದಾದಾರವರು ತನ್ನ ನಾಲ್ಕಾರು ಕಡೆಯ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ, ಏಕೆಂದರೆ ತಂದೆ ತಿಳಿದಿದ್ದಾರೆ- ನನ್ನ ಒಂದೊಂದು ಮಗುವು ಭಲೇ ಲಾಸ್ಟ್ ಪುರುಷಾರ್ಥಿಯಾಗಿದ್ದರೂ ಸಹ ವಿಶ್ವದಲ್ಲಿ ಶ್ರೇಷ್ಠಾತಿ ಶ್ರೇಷ್ಠ ಭಾಗ್ಯವಂತರಾಗಿದ್ದಾರೆ ಏಕೆಂದರೆ ಭಾಗ್ಯವಿದಾತ ತಂದೆಯನ್ನು ತಿಳಿದು, ಗುರುತಿಸಿ ಭಾಗ್ಯವಿದಾತನ ಡೈರೆಕ್ಟ್(ನೇರವಾದ) ಮಕ್ಕಳಾಗಿ ಬಿಟ್ಟಿದ್ದಾರೆ. ಇಂತಹ ಭಾಗ್ಯ ಇಡೀ ಕಲ್ಪದಲ್ಲಿ ಯಾವುದೇ ಆತ್ಮನಿಗೂ ಇಲ್ಲ, ಇರಲು ಸಾಧ್ಯವಿಲ್ಲ. ಜೊತೆ ಜೊತೆ ಇಡೀ ವಿಶ್ವದಲ್ಲಿ ಎಲ್ಲರಿಗಿಂತ ಸಂಪತ್ತಿವಂತ ಹಾಗೂ ಧನವಂತ ಬೇರೆ ಯಾರು ಸಹ ಇರಲು ಸಾಧ್ಯವಿಲ್ಲ. ಭಲೆ ಎಷ್ಟಾದರೂ ಪದಮಪತಿ ಆಗಿರಲಿ ಆದರೆ ಮಕ್ಕಳಾದ ನಿಮ್ಮ ಖಜಾನೆಯೊಂದಿಗೆ ಯಾವುದೇ ಹೋಲಿಕೆಯನ್ನು ಮಾಡಲು ಸಾಧ್ಯವಿಲ್ಲ ಏಕೆಂದರೆ ಮಕ್ಕಳ ಪ್ರತಿಯೊಂದು ಹೆಜ್ಜೆಯಲ್ಲಿ ಪದಮಗಳ ಸಂಪಾದನೆ ಇದೆ. ಇಡೀ ದಿನದಲ್ಲಿ ಪ್ರತಿ ದಿನ ಭಲೇ ಒಂದೆರಡು ಹೆಜ್ಜೆಯೂ ಸಹ ತಂದೆಯ ನೆನಪಿನಲ್ಲಿದ್ದರೆ ಅಥವಾ ಹೆಜ್ಜೆಯನ್ನು ತೆಗೆದುಕೊಂಡರೆ ಎಂದರೆ ಪ್ರತಿಯೊಂದು ಹೆಜ್ಜೆಯಲ್ಲಿ ಪದಮದಷ್ಟು ಸಂಪಾದನೆ... ಎಂದ ಮೇಲೆ ಇಡೀ ದಿನದಲ್ಲಿ ಎಷ್ಟು ಪದಮಗಳು ಜಮಾ ಆಯಿತು? ಒಂದು ದಿನದಲ್ಲಿ ಇಷ್ಟು ಪದಮದ ಸಂಪಾದನೆ ಮಾಡುವವರು ಯಾರಾದರೂ ಇದ್ದಾರೆಯೇ? ಆದ್ದರಿಂದ ಬಾಪ್‌ದಾದಾರವರು ಹೇಳುತ್ತಾರೆ ಒಂದು ವೇಳೆ ಭಾಗ್ಯವಂತರನ್ನು ನೋಡಬೇಕೆಂದರೆ ಅಥವಾ ಪ್ರಪಂಚದಲ್ಲಿ ಎಲ್ಲರಿಗಿಂತ ಶ್ರೀಮಂತ ಆತ್ಮರನ್ನು ನೋಡಬೇಕೆಂದರೆ ತಂದೆಯ ಮಕ್ಕಳನ್ನು ನೋಡಿ.

ಮಕ್ಕಳಾದ ನಿಮ್ಮ ಬಳಿ ಕೇವಲ ಸ್ಥೂಲ ಧನದ ಖಜಾನೆಯೊಂದೇ ಅಲ್ಲ, ಅವರಂತೂ ಕೇವಲ ಧನದಿಂದ ಶ್ರೀಮಂತರಾಗಿದ್ದಾರೆ ಹಾಗೂ ನೀವು ಮಕ್ಕಳು ಎಷ್ಟು ಖಜಾನೆಗಳಿಂದ ಸಂಪನ್ನರಾಗಿದ್ದೀರಿ! ಖಜಾನೆಗಳ ಲಿಸ್ಟ್ ತಿಳಿದುಕೊಂಡಿದ್ದೀರಲ್ಲವೇ? ಈ ಸ್ಥೂಲ ಧನವಂತೂ ಯಾವುದೇ ದೊಡ್ಡ ಮಾತಲ್ಲ ಆದರೆ ನಿಮ್ಮ ಬಳಿ ಇರುವ ಜ್ಞಾನದ ಖಜಾನೆ, ಶಕ್ತಿಗಳ ಖಜಾನೆ, ಸರ್ವ ಗುಣಗಳ ಖಜಾನೆ, ಖುಷಿಯ ಖಜಾನೆ ಹಾಗೂ ಸರ್ವರಿಗೂ ಸುಖ, ಶಾಂತಿಯ ಮಾರ್ಗವನ್ನು ಹೇಳುವುದರಿಂದ ಆಶೀರ್ವಾದಗಳ ಖಜಾನೆ ಸಿಗುತ್ತದೆ, ಈ ಅವಿನಾಶಿ ಖಜಾನೆಗಳು ಪರಮಾತ್ಮನ ಮಕ್ಕಳ ಹೊರತು ಬೇರೆ ಯಾರ ಬಳಿಯೂ ಅವಿನಾಶಿಯಾಗಿ ಇಲ್ಲ. ಬಾಪ್‌ದಾದಾರವರಿಗೆ ಇಂತಹ ಖಜಾನೆಗಳ ಮಾಲಿಕ ಮಕ್ಕಳ ಮೇಲೆ ಎಷ್ಟು ಆತ್ಮಿಕ ಗರ್ವ ಇದೆ ಹಾಗೂ ಬಾಪ್‌ದಾದಾರವರು ಸದಾ ಮಕ್ಕಳನ್ನು ಈ ರೀತಿ ಸಂಪನ್ನವಾಗಿ ನೋಡಿ. ಇದೇ ಗೀತೆಯನ್ನು ಹಾಡುತ್ತಾರೆ ವಾಹ್ ಮಕ್ಕಳೇ! ನಿಮಗೂ ಸಹ ತಮ್ಮ ಮೇಲೆ ಇಷ್ಟು ಆತ್ಮಿಕ ಗರ್ವ ಅರ್ಥಾತ್ ನಶೆ ಇದೆಯೇ!

ಕೈಯಿಂದ ಚಪ್ಪಾಳೆಯನ್ನು ಹೊಡೆಯಬಹುದು. (ಎಲ್ಲರೂ ಚಪ್ಪಾಳೆಯನ್ನು ಹೊಡೆದರು) ಎರಡು ಕೈಗಳಿಗೂ ಏಕೆ ಕಷ್ಟವನ್ನು ಕೊಡುತ್ತೀರಿ, ಒಂದು ಕೈಯಿಂದ ಚಪ್ಪಾಳೆ ಹೊಡೆಯಿರಿ. ಒಂದು ಕೈಯಿಂದ ಚಪ್ಪಾಳೆ ಹೊಡೆಯುವುದು ಬರುತ್ತದೆಯಲ್ಲವೇ! ಬ್ರಾಹ್ಮಣರದು ಎಲ್ಲವೂ ಸಹ ಭಿನ್ನವಾಗಿದೆ. ಬ್ರಾಹ್ಮಣರು ಶಾಂತಿ ಪ್ರಿಯರಾಗಿದ್ದಾರೆ ಆದ್ದರಿಂದ ಚಪ್ಪಾಳೆಯೂ ಸಹ ಶಾಂತಿಯ ಚಪ್ಪಾಳೆಯಾಗಿದೆ. ಹಾಗಾದರೆ ನಶೆಯಂತೂ ಎಲ್ಲರಿಗೂ ಸದಾ ಇದೆ ಮುಂದೆಯೂ ಇರುತ್ತದೆ. ನಿಶ್ಚಿತ ವಾಗಿದೆ.

ಬಾಪ್‍ದಾದಾರವರು ಸಮಯದ ಪರಿವರ್ತನೆಯ ಗತಿಯನ್ನು ನೋಡಿ ಮಕ್ಕಳ ಪುರುಷಾರ್ಥದ ವೇಗವನ್ನು ಸಹ ನೋಡುತ್ತಿದ್ದರು. ಬಾಪ್‍ದಾದಾರವರು ಪ್ರತಿಯೊಂದು ಮಗುವಿನ ಜೀವನವನ್ನು ಸದಾ ಜೀವನ್ ಮುಕ್ತ ಸ್ಥಿತಿಯಲ್ಲಿ ನೋಡಲು ಬಯಸುತ್ತಾರೆ. ಇದು ನಿಮ್ಮೆಲ್ಲರ ಚಾಲೆಂಜ್ ಆಗಿದೆ- ತಂದೆಯಿಂದ ಮುಕ್ತಿ ಜೀವನ್ ಮುಕ್ತಿಯ ಆಸ್ತಿಯನ್ನು ಬಂದು ತೆಗೆದುಕೊಳ್ಳಿ. ಆದರೆ ನಿಮಗಂತೂ ಮುಕ್ತಿ ಹಾಗೂ ಜೀವನ್ ಮುಕ್ತಿಯ ಆಸ್ತಿ ಸಿಕ್ಕಿ ಬಿಟ್ಟಿದೆ ಅಲ್ಲವೇ? ಅಥವಾ ಸಿಕ್ಕಿಲ್ಲವೇ?( ಸಿಕ್ಕಿದೆ) ಸತ್ಯಯುಗದಲ್ಲಿ ಅಥವಾ ಮುಕ್ತಿಧಾಮದಲ್ಲಿ ಮುಕ್ತಿಯ ಅಥವಾ ಜೀವನ್ ಮುಕ್ತಿಯ ಅನುಭವವನ್ನು ಮಾಡಲು ಸಾಧ್ಯವಿಲ್ಲ. ಮುಕ್ತಿ ಜೀವನ್ ಮುಕ್ತಿಯ ಆಸ್ತಿಯ ಅನುಭವ ಈಗ ಸಂಗಮದಲ್ಲಿಯೇ ಮಾಡಬೇಕು. ಜೀವನದಲ್ಲಿ ಇರುತ್ತಲೂ, ಸಮಯ ಸೂಕ್ಷ್ಮವಾಗುತ್ತಿದ್ದಂತೆ, ಪರಿಸ್ಥಿತಿಗಳು, ಸಮಸ್ಯೆಗಳು, ವಾಯುಮಂಡಲ ಡಬಲ್ ದೂಷಿತ ಆಗುತ್ತಿದ್ದರೂ ಸಹ ಇವರು ಎಲ್ಲಾ ಪ್ರಭಾವಗಳಿಂದ ಮುಕ್ತ, ಜೀವನದಲ್ಲಿ ಇರುತ್ತಲೂ  ಈ ಎಲ್ಲಾ ಭಿನ್ನ-ಭಿನ್ನ ಬಂಧನಗಳಿಂದ ಮುಕ್ತ. ಒಂದು ಸೂಕ್ಷ್ಮ ಬಂಧನವೂ ಇರಬಾರದು. ಇಂತಹ ಜೀವನ್ ಮುಕ್ತ ಆಗಿದ್ದೀರಾ ಅಥವಾ ಅಂತಿಮದಲ್ಲಿ ಆಗುತ್ತೀರಾ? ಈಗ ಆಗುತ್ತೀರಾ ಅಥವಾ ಅಂತಿಮದಲ್ಲಿ ಆಗುತ್ತೀರಾ?  ಅಂತಿಮದಲ್ಲಿ ಆಗುವ ಬದಲಾಗಿ ಈಗಲೇ ಆಗಬೇಕು, ಅಥವಾ ಆಗಿದ್ದೀರಿ ಅಥವಾ ಆಗಲೇಬೇಕು, ಎನ್ನುವವರು ಕೈ ಎತ್ತಿ?( ಎಲ್ಲರೂ ಕೈ ಎತ್ತಿದರು) ಎರಡರಲ್ಲಿಯೂ ಮಿಕ್ಸ್(ಮಿಶ್ರವಾಗಿ) ಕೈ ಎತ್ತುತ್ತಿದ್ದಾರೆ, ಚತುರರಾಗಿದ್ದೀರಿ. ಭಲೇ ಚತುರತೆಯನ್ನು ತೋರಿಸಿ. ಆದರೆ ಬಾಪ್‍ದಾದಾರವರು ಈಗಿನಿಂದಲೇ ಸ್ಪಷ್ಟವಾಗಿ ಹೇಳುತ್ತಿದ್ದಾರೆ, ಅಟೆನ್ಶನ್ ಪ್ಲೀಸ್( ದಯವಿಟ್ಟು ಗಮನಿಸಿ) ತಂದೆ ಪ್ರತಿಯೊಬ್ಬ ಬ್ರಾಹ್ಮಣ ಮಗುವನ್ನು ಸಹ ಬಂಧನ ಮುಕ್ತ, ಜೀವನ್ ಮುಕ್ತ ಮಾಡಲೇಬೇಕು ಎಂದುಕೊಳ್ಳುತ್ತಿದ್ದಾರೆ. ಭಲೇ ಯಾವುದೇ ವಿಧಿಯಿಂದ, ಆದರೆ ಅವಶ್ಯವಾಗಿ ಮಾಡಬೇಕು. ತಿಳಿದಿದ್ದೀರಲ್ಲವೇ ಯಾವ ವಿಧಿಗಳಿವೆ ಎಂದು? ಇಷ್ಟು ಚತುರರಂತೂ ಆಗಿದ್ದೀರಲ್ಲವೇ! ಹಾಗಾದರೆ ನೀವು ಆಗಲೇ ಬೇಕಾಗಿದೆ. ಬಯಸಿರಿ, ಬಯಸದೇ ಇರಿ ಆದರೆ ಆಗಲೇ ಬೇಕಾಗಿದೆ. ನಂತರ ಏನು ಮಾಡುವಿರಿ (ಈಗಿನಿಂದಲೇ ಆಗುತ್ತೇವೆ) ನಿಮ್ಮ ಬಾಯಲ್ಲಿ ಗುಲಾಬ್ ಜಾಮೂನ್. ಎಲ್ಲರ ಬಾಯಲ್ಲಿ ಗುಲಾಬ್ ಜಾಮೂನ್ ಬಂದುಬಿಟ್ಟಿತು ಅಲ್ಲವೇ. ಆದರೆ ಇದು ಗುಲಾಬ್ ಜಾಮೂನ್ ಆಗಿದೆ- ಈಗಲೇ ಬಂದನ ಮುಕ್ತ ಆಗುವುದಕ್ಕಾಗಿ. ಹಾಗೆ ಸುಮ್ಮನೆ ಗುಲಾಬ್ ಜಾಮೂನ್ ತಿಂದುಬಿಡಬೇಡಿ .

ಕೋಣೆಯ(ಹಾಲ್) ಶೋಭೆ ಬಹಳ ಚೆನ್ನಾಗಿದೆ. ಮಾಲೆಯಂತೆ ಎನಿಸುತ್ತಿದೆ. ಇಲ್ಲಿಂದ ಬಂದು ನೋಡಿದರೆ ಮಾಲೆಯಂತೆ ಎನಿಸುತ್ತದೆ. ಈ ಕುರ್ಚಿಯವರ ಮಾಲೆ ತಯಾರಾಗಿಬಿಟ್ಟಿದೆ. ಚೆನ್ನಾಗಿದೆ. ಕಾರಣ- ಅಕಾರಣ ಹೇಗೆ ಈಗ ಕುರ್ಚಿಯನ್ನು ತೆಗೆದುಕೊಂಡಿದ್ದೀರಿ ಇದೇ ರೀತಿ  ಬಾಪ್‍ದಾದಾರವರು ಫೈನಲ್ ಸಮಯ ಪ್ರಮಾಣ ಸಿಟಿ  ಹೊಡೆಯುತ್ತಾರೆ- ಜೀವನ್ ಮುಕ್ತಿಯ ಕುರ್ಚಿಯ ಮೇಲೆ ಕುಳಿತುಕೊಂಡು ಬಿಡಿ ಎಂದು, ಆಗ ಸಹ ಕುಳಿತುಕೊಳ್ಳುತ್ತೀರಾ ಅಥವಾ ಕೇವಲ ಈಗ

ಕುರ್ಚಿಯ ಮೇಲೆ ಕುಳಿತುಕೊಂಡಿದ್ದೀರಾ? ಧರಣಿಯ ಮೇಲೆ ಕುಳಿತುಕೊಂಡಿರುವವರು ಕುರ್ಚಿಯನ್ನು ಪಡೆಯುವುದಿಲ್ಲ ಎಂದಲ್ಲ, ಮೊದಲು ನೀವು, ಧರಣಿಯ ಮೇಲೆ ಕುಳಿತುಕೊಳ್ಳುವುದೇ ತಪಸ್ಸಿನ ಚಿಹ್ನೆಯಾಗಿದೆ. ಆರೋಗ್ಯವಂತರ ಚಿಹ್ನೆಯಾಗಿದೆ. ಆರೋಗ್ಯವೂ ಇದೆ, ತಪಸ್ಸಿನ ಮೂಲಕ ಖಜಾನೆಗಳ ಐಶ್ವರ್ಯವೂ ಇದೆ ಎಂದ ಮೇಲೆ ಎಲ್ಲಿ ಆರೋಗ್ಯ ಇದೆ, ಐಶ್ವರ್ಯವಿದೆಯೋ ಅಲ್ಲಿ ಖುಷಿಯಂತೂ ಇದ್ದೇ ಇರುತ್ತದೆ. ಚೆನ್ನಾಗಿದೆ- ಆರೋಗ್ಯವಂತರು, ಐಶ್ವರ್ಯವಂತರೂ ಸಹ ಆಗಿದ್ದೀರಿ.

ಬಾಪ್‌ದಾದಾರವರು ಇಂದು  ಮಕ್ಕಳ ಮೂರು ಪ್ರಕಾರದ ಸ್ಥಿತಿಗಳನ್ನು ನೋಡುತ್ತಿದ್ದರು. ಮೊದಲಿನವರು ಪುರುಷಾರ್ಥಿ, ಇದರಲ್ಲಿ ಪುರುಷಾರ್ಥಿಯೂ ಇದ್ದಾರೆ ಹಾಗೂ ತೀವ್ರ ಪುರುಷಾರ್ಥಿಯೂ ಇದ್ದಾರೆ. ಎರಡನೆಯವರು- ಪುರುಷಾರ್ಥದ ಪ್ರಾರಬ್ಧ ಜೀವನ್ ಮುಕ್ತ ಅವಸ್ಥೆಯ ಸ್ಥಿತಿಯನ್ನು ಅನುಭವ ಮಾಡುತ್ತಿದ್ದಾರೆ. ಆದರೆ ಕೊನೆಯ ಸಂಪೂರ್ಣ ಸ್ಥಿತಿ ಆಗಿದೆ- ದೇಹದಲ್ಲಿ ಇದ್ದರೂ ಸಹ ವಿದೇಹಿ ಅವಸ್ಥೆಯ ಅನುಭವ. ಮೂರು ಸ್ಥಿತಿಗಳನ್ನು ನೋಡಿದರು. ಪುರುಷಾರ್ಥದ ಸ್ಥಿತಿಯಲ್ಲಿರುವ ಮಕ್ಕಳನ್ನು  ಜಾಸ್ತಿ ಸಂಖ್ಯೆಯನ್ನು ನೋಡಿದರು. ಜೀವನ್ ಮುಕ್ತಿಯ ಪ್ರಾರಬ್ಧವೆಂದರೆ ಸೇವಾಕೇಂದ್ರದ ನಿಮಿತ್ತರಾಗುವುದು, ಅಥವಾ ಒಳ್ಳೆಯ ಭಾಷಣ ಮಾಡುವವರಾಗುವುದು ಅಥವಾ ಡ್ರಾಮಾನುಸಾರ ಬೇರೆ ಬೇರೆ ವಿಶೇಷ ಸೇವೆಯಲ್ಲಿ ನಿಮಿತ್ತರಾಗುವುದಲ್ಲ, ಇದು ಪ್ರಾರಬವಲ್ಲ... ಇದಂತೂ ಲಿಫ್ಟ್ ಆಗಿದೆ ಇನ್ನಷ್ಟು ಮುಂದೆ ಹೋಗುವುದಕ್ಕಾಗಿ, ಸರ್ವರ ಮೂಲಕ ಆಶೀರ್ವಾದಗಳನ್ನು ಪಡೆದುಕೊಳ್ಳುವುದಕ್ಕಾಗಿ ಆದರೆ ಜೀವನ್ ಮುಕ್ತಿಯೇ ಪ್ರರಬ್ಧವಾಗಿದೆ. ಯಾವುದೇ ಬಂಧನವಿರದಿರಲಿ ನೀವು ಒಂದು ಚಿತ್ರದಲ್ಲಿ ತೋರಿಸುತೀರಲ್ಲವೇ! ಸಾಧಾರಣ ಅಜ್ಞಾನಿ ಆತ್ಮರನ್ನು ಹಲವಾರು ಹಗ್ಗಗಳಿಂದ ಕಟ್ಟಿರುವಂತೆ ತೋರಿಸುತ್ತೀರಿ. ಅವುಗಳು ಅಜ್ಞಾನಿ ಆತ್ಮರಿಗಾಗಿ ಕಬ್ಬಿಣದ ಸರಪಳಿಗಳಾಗಿವೆ. ದೊಡ್ಡ ದೊಡ್ಡ ಬಂಧನಗಳಾಗಿವೆ. ಆದರೆ ಜ್ಞಾನಿ ಆತ್ಮರಾದ ಮಕ್ಕಳಿಗೆ ಬಹಳ ಸೂಕ್ಷ್ಮ ಹಾಗೂ ಆಕರ್ಷಣೆ ಮಾಡುವಂತಹ ದಾರಗಳಿವೆ. ಕಾಣಿಸುವಂತಹ ಕಬ್ಬಿಣದ ಸರಪಳಿಗಳು ಈಗಿಲ್ಲ. ಬಹಳ ಸೂಕ್ಷ್ಮವೂ ಆಗಿದೆ, ರಾಯಲ್ ಸಹ ಆಗಿದೆ. ಪರ್ಸನಾಲಿಟಿಯನ್ನು (ವ್ಯಕ್ತಿತ್ವ) ಅನುಭವ ಮಾಡಿಸುವಂತಹದ್ದೂ ಆಗಿದೆ, ಆದರೆ ಆ ದಾರಗಳು ಕಣ್ಣಿಗೆ ಕಾಣಿಸುವುದಿಲ್ಲ, ತಮ್ಮ ಒಳ್ಳೆಯತನ ಎಂದು ಅನಿಸುತ್ತದೆ. ಆದರೆ ಅದು ಒಳ್ಳೆಯತನ ಆಗಿರುವುದಿಲ್ಲ, ಅವರಿಗೆ ಒಳ್ಳೆಯತನ ಎಂದು ಅನಿಸುತ್ತದೆ, ನಾನು ಬಹಳ ಒಳ್ಳೆಯವನು ಎಂದು ಅವರಿಗೆ ಅನಿಸುತ್ತದೆ. ನಾವು ಬಹಳ ಮುಂದುವರಿಯುತ್ತಿದ್ದೇವೆ ಎಂದು ಅನಿಸುತ್ತದೆ. ಈ ಜೀವನ ಬಂಧನದ ದಾರಗಳು ಮೆಜಾರಿಟಿ( ಬಹಳಷ್ಟು) ಆತ್ಮರಲ್ಲಿ ಭಲೇ ಒಂದಾಗಿರಲಿ, ಅಥವಾ ಅರ್ಧ ಆಗಿರಲಿ ಇರುವುದನ್ನಂತೂ ಬಾಪ್‌ದಾದಾರವರು ನೋಡುತ್ತಿದ್ದರು. ಆದರೆ ಜೀವನ್ ಮುಕ್ತ ಆತ್ಮರನ್ನು  ಬಹಳ ಬಹಳ ಕಡಿಮೆ ನೋಡಿದರು. ಲೆಕ್ಕದ ಅನುಸಾರ ಇದು ಎರಡನೆಯ ಸ್ಥಿತಿಯಾಗಿದೆ ಜೀವನ ಮುಕ್ತ, ಕೊನೆಯ ಸ್ಥಿತಿಯಂತೂ ದೇಹದಿಂದ ಭಿನ್ನ ವಿದೇಹೀ ತನದಲ್ಲಿರುವುದಾಗಿದೆ. ಈ ಸ್ಥಿತಿಗಾಗಿ ಹಾಗೂ ಯಾವ ಸ್ಥಿತಿಯನ್ನು ಹೇಳಿದೆವೋ ಅದಕ್ಕಾಗಿ ಬಹಳ ಬಹಳ ಗಮನ ಬೇಕಾಗಿದೆ. 99ನೆಯ ವರ್ಷ ಬರುತ್ತದೆ ಆಗ ಏನಾಗುವುದು? ಏನು ಮಾಡಬೇಕು? ಏನು ಮಾಡಲಿ, ಏನು ಮಾಡಬಾರದು? ಎಂದು ಎಲ್ಲಾ ಮಕ್ಕಳು ಕೇಳುತ್ತಾರೆ.

ಬಾಪ್‌ದಾದಾರವರು ಹೇಳುತ್ತಾರೆ 99ರ ವಿಷಯ ವನ್ನು ಬಿಡಿ, ಈಗಿನಿಂದ ವಿದೇಹಿ ಸ್ಥಿತಿಯ ಅನುಭವ ಬಹಳಷ್ಟು ಬೇಕಾಗಿದೆ. ಏನೆಲ್ಲಾ ಪರಿಸ್ಥಿತಿಗಳು ಬರುತ್ತಿದೆ ಹಾಗೂ ಬರುವುದಿದೆಯೋ ಅದರಲ್ಲಿ ವಿದೇಹಿ ಸ್ಥಿತಿಯ ಅಭ್ಯಾಸ ಬಹಳ ಬೇಕಾಗಿದೆ. ಆದ್ದರಿಂದ ಬೇರೆ ಎಲ್ಲಾ ಮಾತುಗಳನ್ನು ಬಿಟ್ಟು, ಹೀಗಾಗಿ ಬಿಟ್ಟರೆ, ಹೀಗಾಗಿ ಬಿಟ್ಟರೆ.... ಏನಾಗುವುದೋ, ಈ ಪ್ರಶ್ನೆಗಳನ್ನು ಬಿಟ್ಟುಬಿಡಿ. ವಿದೇಹಿತನದ ಅಭ್ಯಾಸ ಮಾಡುವ ಮಕ್ಕಳಿಗೆ ಯಾವುದೇ ಪರಿಸ್ಥಿತಿ ಹಾಗೂ ಯಾವುದೇ ಏರುಪೇರು ಪ್ರಭಾವ ಮಾಡಲು ಸಾಧ್ಯವಿಲ್ಲ. ಭಲೆ ಪ್ರಕೃತಿಯ ಐದು ತತ್ವಗಳು ಚೆನ್ನಾಗಿ ಏರುಪೇರಿನಲ್ಲಿ ತರುವ ಪ್ರಯತ್ನ ಪಟ್ಟರೂ ಸಹ ವಿದೇಹಿ ಸ್ಥಿತಿಯ ಅಭ್ಯಾಸಿ ಆತ್ಮರು ಅಚಲ, ಸ್ಥಿರ ಪಾಸ್ ವಿತ್ ಆನರ್( ಗೌರವಾನ್ವಿತ ತೇರ್ಗಡೆ) ಆಗುವ ಪ್ರಮಾಣವಾಗಿರುವರು. ಬಾಪ್‌ದಾದಾರವರು ಸಮಯ ಪ್ರತಿ ಸಮಯ ಸೂಚನೆಯನ್ನು ಸಹ ಕೊಡುತ್ತಿದ್ದಾರೆ ಹಾಗೂ ಕೊಡುತ್ತಿರುತ್ತಾರೆ. ನೀವು ಯೋಚಿಸುತ್ತೀರಿ, ಯೋಜನೆಯನ್ನು ಸಹ ತಯಾರು ಮಾಡುತ್ತೀರಿ, ಮಾಡಿರಿ. ಭಲೇ ಯೋಚಿಸಿ ಆದರೆ ಏನಾಗುತ್ತದೆಯೋ...ಎಂದು ಆಶ್ಚರ್ಯವಂತರಾಗಿ ಅಲ್ಲ. ವಿದೇಹಿಯಾಗಿ, ಸಾಕ್ಷಿಯಾಗಿ ಯೋಚಿಸಿರಿ, ಯೋಜನೆಯನ್ನು (ಪ್ಲಾನ್‌ಅನ್ನು) ತಯಾರು ಮಾಡಿರಿ ಹಾಗೂ ಕ್ಷಣದಲ್ಲಿ ಯೋಜನೆಯ ಸ್ಥಿತಿಯನ್ನು ಧಾರಣೆ ಮಾಡುತ್ತಾ ನಡೆಯಿರಿ. ಈಗ ಸ್ಥಿತಿಯ ಅವಶ್ಯಕತೆ ಇದೆ. ಈ ವಿದೇಹಿ ಸ್ಥಿತಿಯಿಂದ ಪರಿಸ್ಥಿತಿಗಳನ್ನು ಸಹಜವಾಗಿ ಪಾರು ಮಾಡಬಹುದಾಗಿದೆ. ಮೋಡ(ಮೇಘ)ಗಳು ಬಂದವು, ಹಾಗೂ ಹೊರಟು ಹೋದವು ಎಂದಂತೆ. ಹಾಗೂ ವಿದೇಹಿ, ಅಚಲ, ಸ್ಥಿರವಾಗಿದ್ದು ಆಟವನ್ನು ನೋಡಬೇಕು. ಈಗ ಅಂತಿಮ ಸಮಯವನ್ನು ಯೋಚಿಸುತ್ತೀರಿ ಆದರೆ ಅಂತಿಮ ಸ್ಥಿತಿಯನ್ನು ಯೋಚಿಸಿರಿ.

ನಾಲ್ಕಾರು ಕಡೆಯ ಸೇವೆಯ ಸಮಾಚಾರವನ್ನು ಬಾಪ್‌ದಾದಾರವರು ಕೇಳುತ್ತಾ ಇರುತ್ತಾರೆ ಹಾಗೂ ಹೃದಯದಿಂದ ಎಲ್ಲಾ ವಿಶ್ರಾಂತರಹಿತ ಸೇವಾಧಾರಿಗಳಿಗೆ ಶುಭಾಶಯಗಳನ್ನು ಸಹ ಕೊಡುತ್ತಾರೆ, ಸೇವೆಯನ್ನು ಬಹಳ ಉತ್ಸಾಹ ಉಲ್ಲಾಸದಿಂದ ಮಾಡುತ್ತಿದ್ದೀರಿ, ಹಾಗೂ ಮುಂದೆಯೂ ಮಾಡುತ್ತಾ ಹೋಗಿ ಆದರೆ ಸೇವೆ ಹಾಗೂ ಸ್ಥಿತಿಯ ಸಮತೋಲನ(ಸಮಾನತೆ,ಬ್ಯಾಲನ್ಸ್), ಕೆಲವೊಮ್ಮೆ ಸ್ವಲ್ಪ ಈ ಕಡೆ ಬಾಗಿ ಹೋಗುತ್ತದೆ, ಕೆಲವು ಬಾರಿ ಇನ್ನೊಂದು ಕಡೆ ಬಾಗುತ್ತದೆ. ಆದ್ದರಿಂದ ಬಹಳ ಸೇವೆಯನ್ನು ಮಾಡಿರಿ, ಬಾಪ್‌ದಾದಾರವರು ಸೇವೆಗಾಗಿ ನಿರಾಕರಿಸುವುದಿಲ್ಲ, ಇನ್ನಷ್ಟು ಜೋರಾಗಿ ಮಾಡಿರಿ ಆದರೆ ಸೇವೆ ಹಾಗೂ ಸ್ಥಿತಿಯ ಸಮತೋಲನವನ್ನು ಸದಾ ಇಡುತ್ತಾ ನಡೆಯಿರಿ. ಸ್ಥಿತಿಯನ್ನು ತಯಾರು ಮಾಡಿಕೊಳ್ಳುವುದರಲ್ಲಿ ಸ್ವಲ್ಪ ಪರಿಶ್ರಮ ಹಿಡಿಸುತ್ತದೆ ಹಾಗೂ ಸೇವೆಯಂತೂ ಸಹಜವಾಗಿ ಆಗುತ್ತದೆ, ಆದ್ದರಿಂದ ಸೇವೆಯ ಬಲ ಸ್ವಲ್ಪ ಸ್ಥಿತಿಗಿಂತ ಜಾಸ್ತಿಯಾಗಿ ಬಿಡುತ್ತದೆ. ಸಮತೋಲನವನ್ನು ಇಡಿ ಹಾಗೂ ಬಾಪ್‌ದಾದಾರವರ, ಸರ್ವ ಸೇವೆ ಮಾಡುವಂತಹ ಆತ್ಮರ ಸಂಬಂಧ - ಸಂಪರ್ಕದಲ್ಲಿ ಬರುವಂತಹ ಬ್ರಾಹ್ಮಣ ಪರಿವಾರದ ಆಶೀರ್ವಾದಗಳನ್ನು ಪಡೆಯುತ್ತಾ ನಡೆಯಿರಿ. ಈ ಆಶೀರ್ವಾದಗಳ ಖಾತೆಯನ್ನು ಬಹಳಷ್ಟು ಜಮಾ ಮಾಡಿರಿ. ಈಗಿನ ಆಶೀರ್ವಾದಗಳ ಖಾತೆ ಆತ್ಮರಾದ ನಿಮ್ಮಲ್ಲಿ ಎಷ್ಟು ಸಂಪನ್ನವಾಗಿರಬೇಕೆಂದರೆ ಆ ಖಾತೆಯಿಂದ ದ್ವಾಪರದಿಂದ ನಿಮ್ಮ ಚಿತ್ರಗಳ ಮೂಲಕ ಎಲ್ಲರಿಗೂ ಆಶೀರ್ವಾದಗಳು ಸಿಗುತ್ತಾ ಇರುಬೇಕು. ಅನೇಕ ಜನ್ಮಗಳಲ್ಲಿ ಆಶಿರ್ವಾದಗಳನ್ನು ಕೊಡಬೇಕಾಗಿದೆ ಆದರೆ ಜಮಾ ಒಂದೇ ಜನ್ಮದಲ್ಲಿ ಮಾಡಬೇಕಾಗಿದೆ ಆದ್ದರಿಂದ ಏನು ಮಾಡುವಿರಿ? ಸ್ಥಿತಿಯನ್ನು ಸದಾ ಮುಂದಿಟ್ಟುಕೊಂಡು ಸೇವೆಯಲ್ಲಿ

ಮುಂದುವರೆಯುತ್ತಾ ಹೋಗಿ. ಏನಾಗುವುದೋ ಎಂದು  ಯೋಚಿಸಬೇಡಿರಿ. ಬ್ರಾಹ್ಮಣ ಆತ್ಮರಿಗಾಗಿ ಒಳ್ಳೆಯದಾಗಿದೆ, ಒಳ್ಳೆಯದೇ ಆಗಲಿದೆ. ಆದರೆ ಸಮತೋಲನವನ್ನು ಇಟ್ಟುಕೊಂಡವರಿಗೆ ಸದಾ ಒಳ್ಳೆಯದೇ ಆಗುತ್ತದೆ. ಸಮತೋಲನ ಕಡಿಮೆ ಇದ್ದರೆ ಕೆಲವೊಮ್ಮೆ ಒಳ್ಳೆಯದು, ಕೆಲವೊಮ್ಮೆ ಸ್ವಲ್ಪ ಒಳ್ಳೆಯದು. ಕೇಳಿಸಿಕೊಂಡಿದ್ದೀರಾ? ಏನು ಮಾಡಬೇಕು ಎಂದು? ಪ್ರಶ್ನಾರ್ಥಕ ಚಿಹ್ನೆ,  ಆಶ್ಚರ್ಯವಂತರಾಗಿ ಯೋಚಿಸುವುದನ್ನು ಸಮಾಪ್ತಿ ಮಾಡಿ, ಈ ರೀತಿ ಅಂತೂ ಆಗುವುದಿಲ್ಲ ಅಲ್ಲವೇ, ಹೀಗಂತೂ ಆಗುವುದಿಲ್ಲ ಅಲ್ಲವೇ ಎಂಬ ಯೋಚನೆಗಳೇ  ಸ್ಥಿತಿಯನ್ನು ಮೇಲೆ ಕೆಳಗೆ ಮಾಡುತ್ತದೆ, ತಿಳಿಯಿತೇ.

ಬಹಳಷ್ಟು ಜನ ಹೊಸಬರು ಬಂದಿದ್ದೀರಿ ಈ ಕಲ್ಪದಲ್ಲಿ ಮೊದಲ ಬಾರಿ ಮಧುಬನಕ್ಕೆ ಬಂದವರು ಕೈಯನ್ನು ಎತ್ತಿರಿ. ಬಹಳ ಒಳ್ಳೆಯದು. ಬಾಪ್‌ದಾದಾ ಮಕ್ಕಳನ್ನು ನೋಡಿ ಖುಷಿ ಪಡುತ್ತಿದ್ದಾರೆ ಮತ್ತು ಬಹಳಷ್ಟು ಖುಷಿಯಿಂದ ಸ್ವಾಗತ ಮಕ್ಕಳೆ! ಸುಸ್ವಾಗತ!! ಎಂದು ಹೇಳುತ್ತಿದ್ದಾರೆ. ಒಳ್ಳೆಯದು, ಅಂತಿಮದ ಮೊದಲೇ ತಲುಪಿದ್ದೀರಿ. ಮಿಲನ ಮಾಡುವ ಸಮಯದಲ್ಲಿಯೇ ತಲುಪಿದ್ದೀರಿ, ಆದ್ದರಿಂದ ಬಂದಿರುವವರಿಗೆ ಸಹ ಮುಂದಕ್ಕೆ ಹೋಗುವ ಅವಕಾಶ ಇನ್ನೂ ಹೆಚ್ಚಿದೆ. ಆದ್ದರಿಂದ ನೀವು ಸುವರ್ಣ ಅವಕಾಶವನ್ನು ತೆಗೆದುಕೊಳ್ಳಿರಿ.

(ವಿದೇಶದ ಬಹಳಷ್ಟು ಸಹೋದರ ಸಹೋದರಿಯರು ಮೊದಲ ಬಾರಿ ಬಂದಿದ್ದಾರೆ, ರಿಟ್ರೀಟ್ ನಲ್ಲಿ ಬಂದಿರುವ ಗೆಸ್ಟ್ (ಅತಿಥಿಗಳು) ಸಹ ಕುಳಿತಿದ್ದಾರೆ) ಒಳ್ಳೆಯದು - ವಿದೇಶಿಯರ ಗುಂಪು ಎದ್ದೇಳಿ. ವಿದೇಶಿಯರಲ್ಲಿರುವ ಒಂದು ವಿಶೇಷತೆ ಬಾಪ್‌ದಾದಾರವರಿಗೆ ಬಹಳ ಒಳ್ಳೆಯದೆನಿಸುತ್ತದೆ. ಅದು ಯಾವುದು? ಎಲ್ಲರಲ್ಲಿಯೂ ಬಹಳ ಉತ್ಸಾಹ ಉಲ್ಲಾಸವಿದೆ- ವಿದೇಶದ ಕೋಣೆ ಕೋಣೆಯಲ್ಲಿಯೂ ತಂದೆಯ ಸ್ಥಾನವನ್ನು ನಿರ್ಮಾಣ ಮಾಡಬೇಕು ಹಾಗೂ ಮಾಡಿಯೂ ಇದ್ದಾರೆ. ಈ ವರ್ಷ ಎಷ್ಟು ಹೊಸ ಸ್ಥಾನಗಳನ್ನು ನಿರ್ಮಾಣ ಮಾಡಿದ್ದೀರಿ? (12- 15) ಸಂದೇಶ ನಾಲ್ಕಾರು ಕಡೆ ಸಿಗಲಿ ಎಂಬ ಒಳ್ಳೆಯ ಉಲ್ಲಾಸವಿದೆ. ಈ ಲಕ್ಷ್ಯ ಬಹಳ ಚೆನ್ನಾಗಿದೆ. ಎಲ್ಲಿ ಹೋದರೂ ಅಲ್ಲಿ ಯಾರನ್ನಾದರೂ ನಿಮಿತ್ತರನ್ನಾಗಿ ಮಾಡುವ ಸೇವೆಯ ಲಕ್ಷ್ಯ ಚೆನ್ನಾಗಿ ಇಡುತ್ತಾರೆ. ಈ ವಿಶೇಷತೆ ಇದೆ. ಪ್ರತಿಯೊಬ್ಬರೂ ಎಷ್ಟಾಗುತ್ತದೆಯೋ ಅಷ್ಟು ತನ್ನನ್ನು ನಿಮ್ಮ ಬಳಿ ಸೇವೆಗೆ ನಿಮಿತ್ತರನ್ನಾಗಿ ಮಾಡುವ ಆಫರ್ (ನೀಡುವುದು) ಸಹ ಮಾಡುತ್ತಾರೆ ಹಾಗೂ ಪ್ರಾಕ್ಟಿಕಲ್ ನಲ್ಲಿಯೂ ಸಹ ಮಾಡುತ್ತಾರೆ. ಮನೆ ಮನೆಯಲ್ಲಿಯೂ ಸಹ ಬಾಬಾರವರ ಮನೆ ಇರಲಿ ಎಂದು ಯೋಚಿಸುತ್ತಾರೆ. ಈ ಉತ್ಸಾಹ ಉಲ್ಲಾಸ ಬಹಳ ಚೆನ್ನಾಗಿದೆ ಆದ್ದರಿಂದ ಈ  ಉತ್ಸಾಹ ಉಲ್ಲಾಸಕ್ಕಾಗಿ ಬಾಪ್‌ದಾದಾರವರು ಅಡ್ವಾನ್ಸ್ (ಮೊದಲೇ) ಮುಂದುವರೆಯುವುದಕ್ಕಾಗಿ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಬಾಪ್‌ದಾದಾರವರು ವಿದೇಶಿ ಅರ್ಥಾತ್ ವಿಶ್ವಕಲ್ಯಾಣಕ್ಕಾಗಿ  ನಿಮಿತ್ತರಾಗುವ ಮಕ್ಕಳಿಗೆ ಇದನ್ನೇ ಹೇಳುತ್ತಾರೆ- ಈಗ ಸೇವೆ ಹಾಗೂ ವಿದೇಹೀ ಅವಸ್ಥೆಯಲ್ಲಿ ನಂಬರ್‌ವನ್ ವಿದೇಶಿ ಮಕ್ಕಳು ಆಗಲೇಬೇಕು. ಆಗಬೇಕೆ? ಯಾವಾಗ? 99ರಲ್ಲಿ ಆಗಬೇಕೇ ಅಥವಾ ಎರಡು ಸಾವಿರದಲ್ಲಿ ಆಗುವಿರಾ? ಯಾವಾಗಲೋ ಅಲ್ಲ ಈಗಲೇ ಆಗಬೇಕು. ಅವ್ಯಕ್ತ ತಂದೆಯ ಪಾಲನೆಯ ಪ್ರತ್ಯಕ್ಷ ಸಾಕ್ಷಿಯನ್ನು ಕೊಡಬೇಕು. ಹೇಗೆ ಬ್ರಹ್ಮಾ ತಂದೆ ಅವ್ಯಕ್ತರಾಗಿ ವಿದೇಹಿ ಸ್ಥಿತಿಯ ಮೂಲಕ ಕರ್ಮಾತೀತರಾದರೋ ಹಾಗೆಯೇ ಅವ್ಯಕ್ತ ಬ್ರಹ್ಮಾನ ವಿಶೇಷ ಪಾಲನೆಯ ಪಾತ್ರರಾಗಿದ್ದೀರಿ ಆದ್ದರಿಂದ ವಿದೇಹಿ, ಸೇವೆ ಹಾಗೂ ಸ್ಥಿತಿಯ ಸಮತೋಲನವನ್ನಿಡುವುದೇ ಅವ್ಯಕ್ತ ಪಾಲನೆಯ ರೆಸ್ಪಾಂಡ್( ಪ್ರತಿಕ್ರಿಯೆ) ಕೊಡುವುದಾಗಿದೆ. ಸರಿಯೇ, ಒಪ್ಪಿಗೆ ಇದೆಯೇ? ಮಾಡಲೇಬೇಕು. ಬಾಪ್‌ದಾದಾರವರು ಈ ರೀತಿ ಯೋಚಿಸುವುದಿಲ್ಲ-

ನೋಡೋಣ, ಯೋಚಿಸೋಣ. ಇಲ್ಲ. ಮಾಡಲೇಬೇಕು. ನಿಮ್ಮ ಭಾಷೆಯಲ್ಲಿ ಹೇಳಿ- ಮಾಡಲೇಬೇಕು. ಯಾರೆಲ್ಲರೂ ಟಿವಿಯಲ್ಲಿ( ದೂರದರ್ಶನದಲ್ಲಿ) ನೋಡುತ್ತಿರುವಿರೋ ಅವರೆಲ್ಲರೂ ಸಹ ಈ ರೀತಿ ಹೇಳುತ್ತಿದ್ದೀರಲ್ಲವೇ? ಬಾಪ್‌ದಾದಾರವರು ನೋಡುತ್ತಿದ್ದಾರೆ. ಭಲೆ ಭಾರತದಲ್ಲಿ ನೋಡುತ್ತಿರಲಿ, ಅಥವಾ ವಿದೇಶಗಳಲ್ಲಿ ನೋಡುತ್ತಿರಲಿ ಆದರೆ ಎಲ್ಲರಿಗೂ ಉತ್ಸಾಹ ಬರುತ್ತಿದೆ- ನಾವು ಮಾಡುತ್ತೇವೆ, ನಾವು ಮಾಡುತ್ತೇವೆ ಎಂದು. ನಾವು ಮಾಡಲೇಬೇಕು. ಅಡ್ವಾನ್ಸ್‌ಆಗಿ (ಮುಂಚಿತವಾಗಿ) ಶುಭಾಶಯಗಳು. ಒಳ್ಳೆಯದು.

ಯಾರಾದರೇ ಭಾರತವಾಸಿಯರು ಬಂದಿದ್ದೀರೋ, ಭಾರತವಾಸಿಯರಿಗೆ ವಿಶೇಷ ನಶೆ ಇರುತ್ತದೆ. ತಂದೆಯ ಅವತರಣೆ ಭೂಮಿಯು ಭಾರತ ದೇಶವಾಗಿದೆ ಮತ್ತು ಜೊತೆ ಜೊತೆ ಮಿಲನ ಮಾಡಲು ಸಹ ಭಾರತ ದೇಶದಲ್ಲಿಯೇ ಬರುತ್ತಾರೆ. ಡಬಲ್ ನಶೆ ಇರುತ್ತದೆಯಲ್ಲವೇ? ಭಾರತವಾಸಿಯರೇ ವಿದೇಶಗಳಲ್ಲಿ ಸಂದೇಶವನ್ನು ಕೊಟ್ಟಿದ್ದಾರೆ ಆದ್ದರಿಂದ ಭಾರತವಾಸಿಯರೇ ವಿದೇಶಗಳಲ್ಲಿಯೂ ಸಹ ತಮ್ಮ ಪರಿವಾರವನ್ನು ಹುಡುಕಿ ಒಂದೇ ಪರಿವಾರವನ್ನಾಗಿ ತಯಾರು ಮಾಡಿದ್ದಾರೆ ಆದ್ದರಿಂದ ಭಾರತವಾಸಿ ಮಕ್ಕಳಿಗೆ ಸದಾ ಶ್ರೇಷ್ಠತೆ ಇದ್ದೇ ಇದೆ. ಭಾರತ ದೇಶದ ಶ್ರೇಷ್ಠತೆ ಹೆಚ್ಚಾಗಲು ಕಾರಣ ಭಾರತವಾಸಿಯರಿಗೆ ಶ್ರೇಷ್ಠತೆ ಇದೆ. ಆದ್ದರಿಂದ ಯಾರಾದರೆ ಹೊಸಬರು, ಹಳೆಬರು ಬಂದಿದ್ದೀರೋ ಎಲ್ಲರೂ ಬಹಳಷ್ಟು ಪ್ರೀತಿಯಿಂದ ಬಂದಿದ್ದೀರಿ. ಬಾಪ್‌ದಾದಾ ಮಕ್ಕಳೆಲ್ಲರ ಸ್ನೇಹ ಮತ್ತು ನಾಲ್ಕೂ ಕಡೆಯ ಸೇವೆಯ ಸಹಯೋಗವನ್ನು ನೋಡಿ ಖುಷಿಪಡುತ್ತಿದ್ದಾರೆ. ಮತ್ತು ಮಕ್ಕಳು ಸಹ ಸದಾ ಖುಷಿಯಿಂದ ಇದ್ದಾರೆ ಖುಷಿಯಿಂದ ಇದ್ದೀರಲ್ಲವೇ ಯಾವಾಗಲೂ ಖುಷಿಯನ್ನು ಬಿಡಬಾರದು. ಸದಾ ಖುಷಿಯಿಂದ ಇರಬೇಕು.

**ನಾಲ್ಕೂ ಕಡೆ ಇರುವ ಸರ್ವ ಶ್ರೇಷ್ಠ ಭಾಗ್ಯವಾನ್ ಆತ್ಮರಿಗೆ, ಸರ್ವಶ್ರೇಷ್ಠ ಖಜಾನೆಗಳ ಮಾಲಿಕರಾದವರಿಗೆ, ಸದಾ ಸೇವೆ ಮತ್ತು ಸ್ಥಿತಿಯ ಸಮತೋಲನೆಯನ್ನು ಇಟ್ಟುಕೊಳ್ಳುವವರಿಗೆ, ಸರ್ವಶಕ್ತಿ ಸಂಪನ್ನ ಆತ್ಮರಿಗೆ, ಸದಾ ಬಂಧನ ಮುಕ್ತ ಜೀವನ್ ಮುಕ್ತ ಆತ್ಮರಿಗೆ, ಬಾಪ್‌ದಾದಾರವರ ಪ್ರಿಯಸ್ಮೃತಿಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 21-11-1998.

***ಸೇವೆಯ ಜೊತೆ-ಜೊತೆ ದೇಹದಲ್ಲಿ ಇರುತ್ತಲೂ ವಿದೇಹಿ ಸ್ಥಿತಿಯ ಅನುಭವವನ್ನು ಹೆಚ್ಚಿಸಿ.***

ಬಾಪ್‌ದಾದಾರವರು ಇಂದು ಮಕ್ಕಳ ಮೂರು ಪ್ರಕಾರದ ಸ್ಥಿತಿಗಳನ್ನು ನೋಡುತ್ತಿದ್ದರು. ಒಂದಾಗಿದೆ ಪುರುಷಾರ್ಥಿ ಇದರಲ್ಲಿ ಪುರುಷಾರ್ಥಿ ಮತ್ತು ತೀವ್ರ ಪುರುಷಾರ್ಥಿ ಇಬ್ಬರೂ ಇದ್ದಾರೆ. ಎರಡನೆಯದು ಪುರುಷಾರ್ಥದ ಪ್ರಾರಬ್ಧ- ಜೀವನ ಮುಕ್ತ ಅವಸ್ಥೆಯ ಸ್ಥಿತಿಯನ್ನು ಅನುಭವ ಮಾಡುತ್ತಿದ್ದಾರೆ ಮತ್ತು ಕೊನೆಯ ಮೂರನೇಯ ಸಂಪೂರ್ಣ ಸ್ಥಿತಿ ದೇಹದಲ್ಲಿದ್ದರೂ ಸಹ ವಿದೇಹಿ ಅವಸ್ಥೆಯ ಅನುಭವ. ಪುರುಷಾರ್ಥದ ಸ್ಥಿತಿಯಲ್ಲಿ ಜಾಸ್ತಿ ಸಂಖ್ಯೆಯನ್ನು ನೋಡಿದರು. ಪುರುಷಾರ್ಥದ ಪ್ರಾರಬ್ಧ- ಜೀವನ ಮುಕ್ತಿಯೇ ಹೊರತು ಸೇವಾ ಕೇಂದ್ರದ ನಿಮಿತ್ತರಾಗುವುದು ಅಥವಾ ಒಳ್ಳೆಯ ಭಾಷಣ ಮಾಡುವವರಾಗುವುದು ಅಥವಾ ಡ್ರಾಮಾನುಸಾರ ಬೇರೆ ಬೇರೆ ವಿಷಯದ ಸೇವೆಯಲ್ಲಿ ನಿರತರಾಗುವುದಲ್ಲ, ಇದು ಪ್ರಾರಬ್ಧವಲ್ಲ, ಇನ್ನಷ್ಟು ಮುಂದೆ

ಹೋಗುವುದಕ್ಕಾಗಿ ಸರ್ವರ ಆಶೀರ್ವಾದಗಳನ್ನು ಪಡೆಯಲು ಇದು ಲಿಫ್ಟ್ ಆಗಿದೆ. ಈ ಜೀವನ್ ಮುಕ್ತ ಸ್ಥಿತಿಯವರನ್ನು ಬಹಳ ಕಡಿಮೆ ನೋಡಿದರು ಮತ್ತು ಕೊನೆಯ ಸ್ಥಿತಿ ದೇಹದಿಂದ ಅತೀತ ವಿದೇಹಿತನ. ಎಂತಹ ಪರಿಸ್ಥಿತಿ ಬಂದರೂ ವಿದೇಹಿ ಸ್ಥಿತಿ ಇರುವ ಆತ್ಮನ ಮೇಲೆ ಪ್ರಕೃತಿಯ ಐದು ತತ್ವಗಳು ಏರುಪೇರಿನ ಪ್ರಭಾವ ಹಾಕಲು ಸಾಧ್ಯವಿಲ್ಲ. ವಿದೇಹಿ ಸ್ಥಿತಿಯ ಅಭ್ಯಾಸಿ ಆತ್ಮ ಅಚಲ, ಸ್ಥಿರವಾಗಿದ್ದು ಪಾಸ್ ವಿತ್ ಆನರ್(ಗೌರವಾನ್ವಿತೇರ್ಗಡೆ) ಆಗುವ ಪ್ರಮಾಣವನ್ನು ಕೊಡುತ್ತಾರೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರತಿಯೊಂದು ಹೆಜ್ಜೆಯಲ್ಲಿ ಪದಮಾ ಪದಂ ಸಂಪಾದನೆ ಮಾಡುವ ಸಂಪತ್ತಿವಂತನು, ಧನವಂತನು, ಭಾಗ್ಯವಂತನು ಆಗಿದ್ದೇನೆ.

2. ನಾನು ಜ್ಞಾನ ಖಜಾನೆ, ಶಕ್ತಿಗಳ ಖಜಾನೆ, ಸರ್ವ ಗುಣಗಳ ಖಜಾನೆ, ಖುಷಿಯ ಖಜಾನೆ ಮತ್ತು ಆಶೀರ್ವಾದಗಳ ಖಜಾನೆಯಿಂದ ಸಂಪನ್ನವಾಗಿ ಇದ್ದೇನೆ.

3. ನಾನು ಎಲ್ಲಾ ಖಜಾನೆಗಳಿಗೆ ಮಾಲಿಕನಾಗಿದ್ದೇನೆ ಎಂಬ ಆತ್ಮಿಕ ಗರ್ವ ಮತ್ತು ನಶೆಯಲ್ಲಿ ಇದ್ದೇನೆ.

4. ನಾನು ಜೀವನದಲ್ಲಿ ಇರುತ್ತಲೂ ಸಮಯ ಸೂಕ್ಷ್ಮವಾಗುತ್ತಿದ್ದಂತೆ, ಪರಿಸ್ಥಿತಿಗಳು, ಸಮಸ್ಯೆಗಳು, ವಾಯುಮಂಡಲ ಡಬಲ್ ದೋಷಿತವಾಗುತ್ತಿದ್ದರೂ, ಎಲ್ಲಾ ಪ್ರಭಾವಗಳಿಂದ ಮುಕ್ತ, ಬಂಧನಗಳಿಂದ(ಸೂಕ್ಷ್ಮ ಬಂಧನ) ಮುಕ್ತವಾಗಿರುವ ಬಂಧನ ಮುಕ್ತ, ಜೀವನ ಮುಕ್ತ ಸ್ವರೂಪ.

5. ನಾನು ಪುರುಷಾರ್ಥದಿಂದ ಜೀವನ ಮುಕ್ತ ಸ್ಥಿತಿಯನ್ನು ಅನುಭವ ಮಾಡುವ ಸಹಜಯೋಗಿ.

6. ನಾನು ಜೀವನ್ ಮುಕ್ತ ಸ್ಥಿತಿ, ವಿದೇಹಿ ಸ್ಥಿತಿಯ ಮೇಲೆ ಬಹಳಷ್ಟು ಗಮನವಿಟ್ಟು ಪಾಸ್ ವಿತ್ ಆನರ್ ಆಗಿದ್ದೇನೆ.

7. ಯಾವ ಪರಿಸ್ಥಿತಿಯ ಏರುಪೇರಾದರೂ, ಪ್ರಕೃತಿಯ ಪಂಚ ತತ್ವಗಳು ಏರುಪೇರಿನಲ್ಲಿ ತರಲು ಪ್ರಯತ್ನಿಸಿದರೂ ನಾನು ನನ್ನ ವಿದೇಹಿ ಸ್ಥಿತಿಯಿಂದ ಸಂಪೂರ್ಣ ಅಚಲವಾಗಿ, ಸ್ಥಿರವಾಗಿ ಇರುತ್ತಾ ಎಲ್ಲಾ ವಿಷಯಗಳಲ್ಲಿ ಪಾಸ್ ವಿತ್ ಆನರ್ ಆಗುವ ಮತ್ತು ತಂದೆಯ ಸಮಾನವಾಗುವ ಪ್ರಮಾಣವಾಗಿದ್ದೇನೆ.

8. ನಾನು ವಿದೇಹಿಯಾಗಿ, ಸಾಕ್ಷಿಯಾಗಿ ಯೋಚಿಸಿ ಯೋಜನೆಯನ್ನು ತಯಾರು ಮಾಡಿ ಕ್ಷಣದಲ್ಲಿ ಆ ಸ್ಥಿತಿಯನ್ನು ತಯಾರು ಮಾಡಿಕೊಳ್ಳುತ್ತಿದ್ದೇನೆ.

9. ನಾನು ವಿಶ್ರಾಂತರಹಿತ ಸೇವಾದಾರಿಯಾಗಿದ್ದೇನೆ.

10. ನಾನು ಸೇವೆ ಮತ್ತು ಸ್ಥಿತಿಯ ಸಮತೋಲನೆಯಿಂದ ಬಾಪ್‌ದಾದಾ, ಸೇವೆ ಮಾಡುವ ಮತ್ತು ಸಂಬಂಧ ಸಂಪರ್ಕದಲ್ಲಿ ಬರುವ ಬ್ರಾಹ್ಮಣ ಪರಿವಾರದ ಆಶೀರ್ವಾದಗಳಿಗೆ ಪಾತ್ರನಾಗಿದ್ದೇನೆ.

11. ನಾನು ಆಶೀರ್ವಾದಗಳಿಂದ ಎಷ್ಟು ಸಂಪನ್ನವಾಗಿ ಇದ್ದೇನೆ ಎಂದರೆ ದ್ವಾಪರಯುಗದಿಂದ ನನ್ನ ಚಿತ್ರಗಳಿಂದ ಎಲ್ಲರಿಗೂ ಆಶೀರ್ವಾದಗಳು ಲಭಿಸುತ್ತಿವೆ.

12. ನಾನು ಪ್ರಶ್ನಾರ್ಥಕ ಮತ್ತು ಆಶ್ಚರ್ಯಾರ್ಥಕಗಳಿಂದ ಯೋಚಿಸುವುದನ್ನು ಸಮಾಪ್ತಿ ಮಾಡಿ ಸೇವೆ ಮತ್ತು ಸ್ಥಿತಿಯ ಸಮತೋಲನೆಯಿಂದ ನನಗೆ ಸದಾ ಒಳ್ಳೆಯದೇ ಆಗಿದೆ.

13. ನಾನು ಬ್ರಹ್ಮಾ ತಂದೆಯ ಸಮಾನವಾಗಿ ವಿದೇಹಿ ಸ್ಥಿತಿಯಿಂದ ಕರ್ಮಾತೀತವಾಗಿ ಅವ್ಯಕ್ತ ತಂದೆಯ ಪಾಲನೆಗೆ ಪ್ರತ್ಯಕ್ಷ ಪ್ರಮಾಣವನ್ನು ಕೊಟ್ಟಿದ್ದೇನೆ.

14. ನಾನು ಸದಾ ಖುಷಿಯಿಂದ ಇದ್ದೇನೆ.